| | |
|---|---|
| ಪ್ರಾಸಾ | 02 |
| ಚಾಸಾ | 04 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

(1 ರಿಂದ 3 ನೇ ಆರೋಪಿತರನ್ನು ವಿಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 12.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೀತಾ |
| ಗಂಡನ ಹೆಸರು | : | ಸಂದೀಪ್ ಕುಮಾರ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಶಿಕ್ಷಕಿ |
| ವಾಸಸ್ಥಳ | : | ಹೆಚ್ ಕ್ರಾಸ್, ಬೀಚಗೊಂಡನಹಳ್ಳಿ. |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ಮೃತ ನಾರಾಯಣಸ್ವಾಮಿ ಗೊತ್ತು. ಅವರು ನಮ್ಮ ತಂದೆಯ ಸ್ನೇಹಿತರು. ಪ್ರಾಸಾ-1, ಚಾಸಾ-5, ಚಾಸಾ-6 ಗೊತ್ತು. ವಿಸಿಯ ಮುಖಾಂತರ ಹಾಜರುಪಡಿಸಿದ 1 ರಿಂದ 3 ನೇ ಆರೋಪಿತರು ಹಾಗೂ ನ್ಯಾಯಾಲಯದ ಮುಂದಿರುವ 4 ರಿಂದ 6 ನೇ ಆರೋಪಿತರು ಗೊತ್ತಿಲ್ಲ.

ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023

| | |
|---|---|
| ಪ್ರಾಸಾ | 02 |
| ಚಾಸಾ | 04 |

2. ನನ್ನ ತಾಯಿಯ ಮನೆ ಶಿಡ್ಲಘಟ್ಟ ತಾಲ್ಲೂಕಿನ ಜಯಂತಿ ಗ್ರಾಮದಲ್ಲಿರುವ ದ್ಯಾವಪ್ಪನ ಗುಡಿ ಬಳಿ ಇರುತ್ತದೆ. ದಿನಾಂಕ 25-08-2023 ರಂದು ವರಲಕ್ಷ್ಮಿ ಹಬ್ಬ ಇದುದ್ದರಿಂದ ಒಂದು ದಿನ ಮುಂಚಿತವಾಗಿ ತವರು ಮನೆಗೆ ಬರುವಂತೆ ನಮ್ಮ ತಾಯಿ ಹೇಳಿದ್ದರು. ನಾನು ತಂದೆಯನ್ನು ಕಳುಹಿಸುವಂತೆ ಹೇಳಿದ್ದೆನು. ನಂತರ ನನ್ನ ತಂದೆ ತನಗೆ ಶಿಡ್ಲಘಟ್ಟದಲ್ಲಿ ಕೆಲಸವಿದೆ, ನಾರಾಯಣಸ್ವಾಮಿರವರ ಜೊತೆ ಶಿಡ್ಲಘಟ್ಟಕ್ಕೆ ಬರುವಂತೆ ನನಗೆ ಪೋನ್ ಮಾಡಿ ತಿಳಿಸಿದ್ದರು. ದಿನಾಂಕ 24-08-2023 ರಂದು ಬೀಚಗೊಂಡನ ಹಳ್ಳಿಗೆ ನಾರಾಯಣಸ್ವಾಮಿರವರು ಬಂದು ನನ್ನನ್ನು ಹಾಗೂ ನನ್ನ ಮಕ್ಕಳನ್ನು ಸಂಜೆ 4.45-5 ಗಂಟೆ ಸಮಯದಲ್ಲಿ ಓಮಿನಿ ವಾಹನದಲ್ಲಿ ಶಿಡ್ಲಘಟ್ಟಕ್ಕೆ ಕರೆದುಕೊಂಡು ಬಂದಿರುತ್ತಾರೆ. ಶಿಡ್ಲಘಟ್ಟದಿಂದ ನಾನು ನನ್ನ ತಂದೆಯ ಜೊತೆ ನನ್ನ ತವರು ಮನೆಗೆ ಹೋಗಿರುತ್ತೇನೆ. ನಾರಾಯಣಸ್ವಾಮಿರವರೊಂದಿಗೆ ಅವರ ಓಮಿನಿ ವಾಹನದಲ್ಲಿ ಬರುತ್ತಿದ್ದಾಗ ನಾನು ಅನುಮಾಸ್ಪದ ವ್ಯಕ್ತಿಗಳನ್ನು ಅಥವಾ ವಾಹನಗಳನ್ನು ನೋಡಿಲ್ಲ.

3. ಅದೇ ದಿನ ರಾತ್ರಿ 9 ಗಂಟೆ ಸಮಯಕ್ಕೆ, ನಾರಾಯಣಸ್ವಾಮಿರವರನ್ನು ಬೈರಗಾನಹಳ್ಳಿಯಲ್ಲಿ ಕೊಲೆ ಮಾಡಲಾಗಿದೆ ಎಂದು, ಪೋನ್ ಮುಖಾಂತರ ಮಾಹಿತಿ ಬಂದಿರುತ್ತದೆ. ನಾನು ಈ ದಿನ ಹೇಳಿದ ವಿಚಾರವನ್ನು ಮಾತ್ರ ಪೊಲೀಸರಿಗೆ

| | |
|---|---|
| ಪ್ರಾಸಾ | 02 |
| ಚಾಸಾ | 04 |

ಹೇಳಿರುತ್ತೇನೆ. ಬೇರೆ ವಿಚಾರಗಳ ಬಗ್ಗೆ ನಾನು ಹೇಳಿಕೆ ನೀಡಿಲ್ಲ. ಸದರಿ ಓಮಿನಿ ಕಾರಿನ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಓಮಿನಿ ಕಾರಿನ ನಾಲ್ಕು ಪೋಟೋಗಳನ್ನು ತೋರಿಸಲಾಗಿ, ಸದರಿ ಓಮಿನಿ ಕಾರನ್ನು ನೋಡಿ ನಾರಾಯಣಸ್ವಾಮಿರವರ ಓಮಿನಿ ಕಾರು ಎಂದು ಸದರಿ ಪೋಟೋಗಳಲ್ಲಿ ಗುರುತಿಸಿರುತ್ತಾರೆ. ಸದರಿ ನಾಲ್ಕು ಪೋಟೋಗಳನ್ನು ನಿಪಿ 9 ರಿಂದ ನಿಪಿ 12 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

4. ಶಿಡ್ಲಘಟ್ಟ ನಗರದಲ್ಲಿ ಇದ್ದ ನಮ್ಮ ತಂದೆ ನನಗೆ ಹಾಗೂ ಮಕ್ಕಳಿಗೆ ತಿಂಡಿ ಕೊಡಿಸಿ, ನೀವು ಮನೆಗೆ ಹೋಗಿ ಎಂದು, ನಾರಾಯಣಸ್ವಾಮಿರವರ ಓಮಿನಿ ಕಾರಿನಲ್ಲಿ ನನ್ನನ್ನು ಕಳುಹಿಸಿದರು ಎಂದರೆ ಸರಿಯಲ್ಲ. ನಾವು ನಾರಾಯಣಸ್ವಾಮಿರವರ ಓಮಿನಿ ಕಾರಿನಲ್ಲಿ ಶಿಡ್ಲಘಟ್ಟ ಬಿಟ್ಟು ಬರುತ್ತಿದ್ದಾಗ ಎರಡು ಕಪ್ಪು ಬಣ್ಣ ಸ್ಪ್ಲೆಂಡರ್ ಬೈಕುಗಳಲ್ಲಿ 3 ಜನ ನಮ್ಮ ಹಿಂದೆ-ಮುಂದೆ ಹಿಂಬಾಲಿಸಿಕೊಂಡು ಬರುತ್ತಿದ್ದುದ್ದನ್ನು ನೋಡಿ, ಅವರು ಯಾರೆಂದು ಕೇಳಿದಾಗ ನಾರಾಯಣಸ್ವಾಮಿರವರು 1ನೇ ಆರೋಪಿ ಹಾಗೂ ಆತನ

| | |
|---|---|
| ಪ್ರಾಸಾ | 02 |
| ಚಾಸಾ | 04 |

ಸ್ನೇಹಿತರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಾರಾಯಣಸ್ವಾಮಿರವರು ನಮ್ಮನ್ನು ದ್ಯಾವಪ್ಪನಗುಡಿ ಬಳಿ ಸಂಜೆ 7 ಗಂಟೆಗೆ ಕರೆ ತಂದು ನಮ್ಮನ್ನು ನಮ್ಮ ತಾಯಿಯ ಮನೆ ಬಳಿ ಬಿಟ್ಟು ನಾರಾಯಣಸ್ವಾಮಿರವರು ತಮ್ಮ ಓಮಿನಿ ಕಾರನ್ನು ತೆಗೆದುಕೊಂಡು ಅವರ ಊರಿಗೆ ಹೋದರು ಎಂದರೆ ಸರಿಯಲ್ಲ. ನಂತರ 1ನೇ ಆರೋಪಿಯು ಆತನ ಸ್ನೇಹಿತರಾದ 2 ರಿಂದ 5ನೇ ಆರೋಪಿತರೊಂದಿಗೆ ಸೇರಿ, ನಾರಾಯಣಸ್ವಾಮಿರವರನ್ನು ಕೊಲೆ ಮಾಡಲು ಸಂಚು ರೂಪಿಸಿ, 1 ರಿಂದ 3ನೇ ಆರೋಪಿತರು ನಾರಾಯಸ್ವಾಮಿರವರ ಕಾರನ್ನು ಹಿಂಬಾಲಿಸಿ ಬೈರಗಾನಹಳ್ಳಿ ಗ್ರಾಮದ ಬಳಿ ನಾರಾಯಣಸ್ವಾಮಿರವರಿಗೆ ಖಾರದಪುಡಿ ಹಾಕಿ, ಮಚ್ಚು ಹಾಗೂ ಚಾಕುವಿನಿಂದ ಕೊಲೆ ಮಾಡಿದ್ದರು ಎಂದು, 6ನೇ ಆರೋಪಿಯು 1ನೇ ಆರೋಪಿಗೆ ಕುಮ್ಮಕ್ಕು ನೀಡಿದರು ಎಂದು, 4ನೇ ಆರೋಪಿಯು 1ನೇ ಆರೋಪಿಗೆ ಮಚ್ಚನ್ನು ಹಾಗೂ ಬೈಕ್ ನ್ನು ಕೊಟ್ಟು ಸಹಕರಿಸಿದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ದಿನಾಂಕ 07-10-2023 ರಂದು ಪೊಲೀಸರಿಗೆ ಘಟನೆಯ ಬಗ್ಗೆ ವಿವರವಾಗಿ ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ "ಶಿಡ್ಲಘಟ್ಟ ನಗರದಲ್ಲಿ ಇದ್ದ ..............................ತಿಳಿದುಬಂದಿರುತ್ತೆ" ಎಂಬ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯನ್ನು

| | |
|---|---|
| ಪ್ರಾಸಾ | 02 |
| ಚಾಸಾ | 04 |

ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು ನಿಪಿ 13 ಎಂದು ಗುರುತಿಸಲಾಯಿತು. ವಿಸಿ ಮುಖಾಂತರ ಹಾಜರುಪಡಿಸಿದ 1 ರಿಂದ 3 ನೇ ಆರೋಪಿತರನ್ನು ನಾನು ಘಟನಾ ದಿನ ನೋಡಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಸ್ವಾಮಿರವರ ಓಮಿನಿ ಕಾರಿನಲ್ಲಿ ನಾನು ಹಾಗೂ ನನ್ನ ಮಕ್ಕಳು ಶಿಡ್ಲಘಟ್ಟದಿಂದ ನಮ್ಮ ತಾಯಿಯ ಮನೆಗೆ ಹೋಗಿದ್ದರು ಸಹ ಹಾಗೂ ಸದರಿ ಸಮಯದಲ್ಲಿ ಮಾರ್ಗ ಮಧ್ಯ 1 ರಿಂದ 3 ನೇ ಆರೋಪಿತರನ್ನು ನೋಡಿದ್ದರು ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: 1 ರಿಂದ 4 ನೇ ಆರೋಪಿತರ ಪರ ಶ್ರೀಎಂಜಿ ಎಸ್ ಆರ್ ವಕೀಲರಿಂದ:**

ಶ್ರೀ ಎಂಜಿ ಎಸ್ ಆರ್ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದುದರಿಂದ 1 ರಿಂದ 4 ನೇ ಆರೋಪಿತರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಪಾಟೀ ಸವಾಲು: 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:**

ಕುಮಾರಿ ಇವಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದುದರಿಂದ 5 ನೇ ಆರೋಪಿತರ ಪರ ಪಾಟೀ ಸವಾಲು ಇಲ್ಲ ಎಂದು

| | |
|---|---|
| ಪ್ರಾಸಾ | 02 |
| ಚಾಸಾ | 04 |

ತೆಗೆದುಕೊಳ್ಳಲಾಗಿದೆ.

**ಪಾಟೀ ಸವಾಲುಃ 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ ವಕೀಲರಿಂದಃ**

ಶ್ರೀ ಹೆಚ್ ಸಿ ಪಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದುದರಿಂದ 6 ನೇ ಆರೋಪಿತರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 12.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**